ಮಾಡಿದ್ದರೆ ಅವರ ಮೇಲೆ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಅನಂತರ, ಇದರ ಬಗ್ಗೆ ಸಾಕಷ್ಟು ಎಲ್ಲಾ ಮಟ್ಟದಲ್ಲಿಯೂ ಕೂಡ ಆಡಳಿತವನ್ನು ಬಿಗಿಪಡಿಸುವುದಕ್ಕೆ ಮತ್ತು ಯಾವುದೇ ತರಹದ ತಪ್ಪು ಕೆಲಸ ಮಾಡಿದ್ದರೆ, ಅಂತಹವರ ಮೇಲೆ ಕಾರ್ಯಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಆದುದರಿಂದ ತಮ್ಮ ಈ ಶಂಕೆಗೆ ಅವಕಾಶವಿಲ್ಲ. ಯಾವುದೇ ರೀತಿಯಲ್ಲಿ ಎನ್.ಓ.ಸಿ.ಯನ್ನು ಬೇರೆ ಬೇರೆ ಹಂತಗಳಲ್ಲಿ ಕೊಡತಕ್ಕ ಪ್ರಶ್ನೆಯು ಉದ್ಭವವಾಗುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಂಜೂರಾತಿಯನ್ನು ಕೊಡುವಲ್ಲಿ ಅನುಸರಿಸಬೇಕಾದ ನೀತಿ, ಸ್ವರೂಪದ ಬಗ್ಗೆ ಇನ್ನೂ ಕೂಡ ನಿರ್ಣಯವನ್ನು ತೆಗೆದುಕೊಳ್ಳದಿರುವುದರಿಂದ ಎನ್.ಓ.ಸಿ. ಯನ್ನು ಕೊಡತಕ್ಕ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ:- ಉಪಾಧ್ಯಕ್ಷರೇ ಎನ್.ಓ.ಸಿ. ಕೇಳಲು ಇರತಕ್ಕದ್ದು ಸೆಂಟ್ರಲ್ ಸಿಲಿಬಸ್‌ಗೆ ಮಾತ್ರ. ಸೆಂಟ್ರಲ್ ಸಿಲಿಬಸ್‌ಗೆ ಕೂಡ ರಾಜ್ಯ ಸರ್ಕಾರದವರು ಅಲ್ಲಿ ಸಂಸ್ಥೆ ಇದೆಯೋ ಅಥವಾ ಇಲ್ಲವೋ, ಅದು ಸರ್ಕಾದಿಂದ ಮಾನ್ಯತೆಯನ್ನು ಪಡೆದಿದೆಯೋ ಅಥವಾ ಇಲ್ಲವೋ ಎನ್ನತಕ್ಕದ್ದಕ್ಕೆ ಮಾತ್ರ ನೀವು ಕೊಡತಕ್ಕದ್ದು ಆದರೆ ಅಲ್ಲಿ ಶಾಲೆಯೇ ಇಲ್ಲ, ಅಂಥವುಗಳಿಗೆ ಅನುಮತಿಯನ್ನು ಕೊಟ್ಟರೆ ಹೇಗೆ? ಅಂದರೆ ಇವತ್ತು ನಾರಾಯಣಭಟ್ಟರ ಹೆಸರಿನಲ್ಲಿ ಯಾವುದೋ ದೆವ್ವ ಕುಳಿತುಕೊಂಡು ಆರ್ಡರನ್ನು ಮಾಡುತ್ತಿದೆ ಎನ್ನುವಂಥ ರೀತಿಯಲ್ಲಿ ಸರ್ಟಿಫಿಕೇಟ್ ಆಗುತ್ತಿದೆ. ಅಂಥವರಿಗೂ ಮಾನ್ಯತೆ ಸಿಗುತ್ತಿದೆ. ಅದು ಇವತ್ತು ಹಾಲಿ ನಡೆಯುತ್ತಿರತಕ್ಕದ್ದು. ಒಬ್ಬ ಹೈಕೋರ್ಟಿನ ನ್ಯಾಯಾಧೀಶರ ಹೆಸರಿನಲ್ಲಿರತಕ್ಕ ಇಂಥ ವಿದ್ಯಾ ಸಂಸ್ಥೆಗಳಿಗೆ ಅನುಮತಿಯನ್ನು ಕೊಡುವುದರಲ್ಲಿ ತಾರತಮ್ಯವಾಗುತ್ತಿದೆ ಎಂದು ನನ್ನ ಆಕ್ಷೇಪ. ಎನ್.ಓ.ಸಿ.ಯನ್ನು ಕೊಡಬೇಕಾದರೆ ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟವಾದ ರೂಲ್ಸ್ ಏನು ಇದೆ ಅದನ್ನು ತರಿಸಿಕೊಂಡು ನೋಡಿದರೆ ತಮಗೆ ಗೊತ್ತಾಗುತ್ತದೆ ಮತ್ತು ಇದಕ್ಕೆ ಒಂದು ದೊಡ್ಡ ಜಾಲವೇ ಇದೆ. ಆದುದರಿಂದ ಎನ್.ಓ.ಸಿ.ಯನ್ನು ಕೊಡಬೇಕಾದರೆ ಅಲ್ಲಿ ಶಾಲೆ ಇದೆಯೋ ಅಥವಾ ಶಾಲೆ ಇಲ್ಲವೋ ಎನ್ನುವುದನ್ನು ವಿಚಾರ ಮಾಡದೆ ದಯವಿಟ್ಟು, ತಾವು ಅನುಮತಿಯನ್ನು ಕೊಡಬಾರದು ಎನ್ನತಕ್ಕ ಮಾತನ್ನು ಹೇಳುತ್ತಾ ಇದಕ್ಕೆ ತಮ್ಮಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಉಪಾಧ್ಯಕ್ಷರೇ, ಆ ರೀತಿಯ ಯಾವ ಜಾಲವು ಕೂಡ ನಮ್ಮ ಮುಂದೆ ನಡೆಯುವುದಿಲ್ಲ. ಆ ಜಾಲವನ್ನು ಭೇದಿಸಿ ಏನು ಮಾಡಬೇಕೊ ಆ ಎಲ್ಲಾ ಕೆಲಸವನ್ನು ನಾವು ಮಾಡುತ್ತೇವೆ. ನಿಯಮವನ್ನು ಮೀರಿ ಯಾರಾದರೂ ಏನಾದರೂ ಮಾಡಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ವಿಷಯ:- ಬಸ್ಸುಗಳ ಮೇಲೆ ಕುಳಿತು ಪ್ರಯಾಣ ಮಾಡುವವರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 431 (2303)

ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್):- ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಗುಲ್ಬರ್ಗ ಜಿಲ್ಲೆಯಲ್ಲಿ ಸರ್ಕಾರಿ ಬಸ್ಸುಗಳ ಮೇಲೆ ಕುಳಿತು ಜನರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಸ್ಸುಗಳ ಮೇಲೆ ಪ್ರಯಾಣ ಮಾಡಲು ಕಾರಣಗಳೇನು?

ಇ ಬಸ್ಸುಗಳ ಮೇಲೆ ಜನರು ಕುಳಿತು ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ? (ಈ ಮಾರ್ಗಗಳ ಹೆಸರುಗಳನ್ನು ತಿಳಿಸುವುದು)

ಶ್ರೀ ಅಜೀಜ್‌ಸೇಠ್, (ಸಾರಿಗೆ ಮತ್ತು ವಕ್ಫ್ ಸಚಿವರು)-

ಅ ಬಂದಿದೆ.

ಆ ಕೆಟ್ಟ ರಸ್ತೆಗಳ ಪರಿಸ್ಥಿತಿ ಮತ್ತು ವಾಹನ ಸಿಬ್ಬಂದಿಯ ಗೈರುಹಾಜರಿಯಿಂದಾಗಿ ಸಾರಿಗೆಗಳು ರದ್ದಾಗುತ್ತಿರುವುದರಿಂದ ಮತ್ತು ತಡವಾಗಿ ಸಂಚರಿಸುತ್ತಿರುವುದರಿಂದ.

ಇ 1. ದಿನಾಂಕ 13-3-92 ರಿಂದ ಗುಲ್ಬರ್ಗ ಜಿಲ್ಲೆಯಲ್ಲಿ 6 ಹೆಚ್ಚುವರಿ ಮಾರ್ಗಸೂಚಿಗಳನ್ನು (ಬಸ್ಸುಗಳನ್ನು)ಪ್ರಾರಂಭಿಸಲಾಗಿದೆ.(ಪಟ್ಟಿ ಲಗತ್ತಿಸಿದೆ)

2. ಸಾರಿಗೆಗಳ ರದ್ದತಿಯನ್ನು ಕಡಿಮೆ ಮಾಡಲು ಮತ್ತು ಅವುಗಳ ನಿಯಮಿತವಾಗಿ ಕಾರ್ಯಾಚರಣೆಗೊಳಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

3. ಕಡಿಮೆ ಅಂತರದ ಟ್ರಿಪ್‌ಗಳನ್ನು ಹೆಚ್ಚಿಸುವ ಸಲುವಾಗಿ ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗುತ್ತಿದೆ.

4. ಪ್ರಯಾಣಿಕರ ಒತ್ತಡದ (ಓವರ್‌ಲೋಡ್) ನಿವಾರಣೆಗಾಗಿ 92-93ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಇನ್ನೂ 37 ಮಾರ್ಗಸೂಚಿಗಳನ್ನು (ಬಸ್ಸುಗಳನ್ನು) ಹೆಚ್ಚಿಸಲು ಉದ್ದೇಶಿಸಲಾಗಿದೆ.

LIST OF SHORT ROUTES IN GULBARGA DISTRICT ON WHICH ADDITIONAL SERVICES HAVE BEEN INTRODUCED W.E.F.13-3-92.

Sl.No.	Route		Distance in KMs
	From	To	
1.	Gulbarga	Mahagaon	28
2.	Gulbarga	Nippani	23
3.	Gulbarga	Shahabad via bijapur	31
4.	Gulbarga	Khajakotnur	21
5.	Gulbarga	Kandal	16
6.	Gulbarga	Hagargundgi	25
7.	Gulbarga	Harsur	25
8.	Gulbarga	Minajgi	21
9.	Shahabad	Wadi	13
10.	Shahabad	Tonasanalli	6
11.	Shahabad	Revoor	11
12.	Sedam	Adkal	10
13.	Sedam	Kodla	18
14.	Sedam	Yellammagate	10
15.	Aland	Tadkal	18
16.	Aland	Koralli	13
17.	Aland	Khajuri Border	14
18.	Afzalpur	Balluragi	12
19.	Afzalpur	Ghattarga	18

20.	Ghangapur Rly.Station	Dangapur	11
21.	Shahapur	Gogi via Bhimarayagudi	11
22.	Shahapur	Shirawal	14
23.	Shahapur	Doranal	10
24.	Shahapur	Sagar	15
25.	Shahapur	Peth Ammapur	14
26.	Shahapur	Malagathi	14
27.	Yadgir	Wadagera	19
28.	Yadgir	Ramasamudra	13
29.	Yadgir	Hattikuni	12
30.	Jawargi	Narabul	14
31.	Jawargi	Ijeri	18
32.	Jawargi	Kilkar	12
33.	Jawargi	Andola	14

ಶ್ರೀ ಬಾಬುರಾವ್ ಚವ್ಹಾಣ್:- ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಸರ್ಕಾರಿ ಬಸ್ಸುಗಳ ಟಾಪ್ ಮೇಲೆ ಕುಳಿತು ಜನರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಕೊಟ್ಟ ಉತ್ತರದಲ್ಲಿ "ಬಂದಿದೆ" ಎಂದು ಹೇಳಿದ್ದಾರೆ. ಹಾಗೂ ಬಸ್ಸುಗಳ ಟಾಪ್‌ಮೇಲೆ ಪ್ರಯಾಣ ಮಾಡಲು ಕಾರಣವೇನು ಎಂದು ಕೇಳಿದರೆ, ವಾಹನಗಳ ಸಿಬ್ಬಂದಿಯ ಗೈರು ಹಾಜರಿಯಿಂದ ಸಾರಿಗೆಯು ರದ್ದಾಗುತ್ತಿರುವುದೇ ಕಾರಣವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಅಜೀಜ್ ಸೇಟ್:- ತಾವು ಉತ್ತರದಲ್ಲಿ ಕೊಟ್ಟಿರುವುದನ್ನು ಬಿಟ್ಟು ಬೇರೆ ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಬಾಬುರಾವ್ ಚವ್ಹಾಣ್ :- ನಾನು ತಮಗೆ ಕೇಳಿರತಕ್ಕ ಪ್ರಶ್ನೆ ಏನೆಂದರೆ ಬಸ್‌ಗಳ ಟಾಪ್ ಮೇಲೆ ಪ್ರಯಾಣ ಮಾಡಲು ಇಲಾಖೆಯಿಂದ ಪರವಾನಿಗೆಯನ್ನು ಕೊಟ್ಟಿದ್ದೀರಾ? ಇದು ಒಂದನೆಯ ಪ್ರಶ್ನೆ. ಎರಡನೆಯದಾಗಿ ಬಸ್ಸುಗಳ ಟಾಪ್ ಮೇಲೆ ಪ್ರಯಾಣ ಮಾಡುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ "ಬಂದಿದೆ" ಎಂದು ಸ್ಪಷ್ಟವಾಗಿ ಹೇಳುತ್ತಿದ್ದೀರಿ. ಆದರೆ ಈ ರೀತಿ ಬಸ್ಸುಗಳ ಟಾಪ್ ಮೇಲೆ ಜನರು ಕುಳಿತು ಪ್ರಯಾಣ ಮಾಡಿ ಬಿದ್ದು ಕಾಲು, ಕೈಯನ್ನು ಮುರಿದುಕೊಂಡು ಪ್ರಾಣ ಹಾನಿಯಾದರೆ ಅದಕ್ಕೆ ಯಾರು ಜವಾಬ್ದಾರರಾಗುತ್ತಾರೆ? ವಾಹನಗಳ ಸಿಬ್ಬಂದಿಯು ಗೈರು ಹಾಜರಿಯಾಗಲು ಕಾರಣವೇನು? ಇದರ ಬಗ್ಗೆ ಇಲಾಖೆಯವರು ಏನು ಮಾಡುತ್ತಿದ್ದಾರೆ?ಗೈರುಹಾಜರಾದವರನ್ನು ಕೆಲಸದಿಂದ ತೆಗೆದುಹಾಕಿ ಬೇರೆಯವರನ್ನು ನೇಮಕ ಮಾಡಿಕೊಳ್ಳಿ. ನಿಮಗೆ ಸುಮಾರು ಜನ ಡ್ರೈವರ್ಸ್ ಮತ್ತು ಕಂಡಕ್ಟರ್‌ಗಳು ಸಿಗುತ್ತಾರೆ. ಈಗ ಬಸ್ಸುಗಳ ಕೊರತೆ ಇದೆ ಎಂದು ಹಲವಾರು ಮಾರ್ಗವನ್ನು ರದ್ದು ಮಾಡುತ್ತಿದ್ದೀರಿ. ಆದುದರಿಂದ ಗೈರುಹಾಜರಾದವರನ್ನು ತೆಗೆದುಹಾಕಿ ಬೇರೆ ಚಾಲಕರನ್ನು, ಅಥವಾ ನಿರ್ವಾಹಕರನ್ನು ತೆಗೆದುಕೊಂಡು ಅದನ್ನು ನಡೆಸಿಕೊಂಡು ಹೋಗುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ತಾವು ಹೇಳಬೇಕು.

ಶ್ರೀ ಅಜೀಜ್ ಸೇಟ್:- ಉಪಾಧ್ಯಕ್ಷರೇ, ನನಗೆ ಇದಕ್ಕೆ ಉತ್ತರ ಹೇಳಲು ಬಹಳ ಕಷ್ಟವಾಗುತ್ತದೆ. ಏಕೆಂದರೆ ಇದಕ್ಕೆ ಉತ್ತರವನ್ನು ನಾನು ಮೂರನೆ ಸಲ ಹೇಳುತ್ತಿದ್ದೇನೆ, ನಮ್ಮಲ್ಲಿ ನೇಮಕಾತಿ ಮಾಡುವಲ್ಲಿ ತಡವಾಗಿದೆ, ಅದಕ್ಕೆ ಮೂರು ಬಾರಿ ತಡೆಯಾಜ್ಞೆಯನ್ನು ತಂದಿದ್ದಾರೆ, ಇದನ್ನು ಖಾಸಗಿ ಕಮಿಟಿಯಲ್ಲಿ ಹೇಳಿದ್ದೇನೆ, ಆ ಭಾಗದ ಎಂ.ಎಲ್.ಎ. ಗಳ ಮೀಟಿಂಗ್‌ನಲ್ಲಿ ಹೇಳಿದ್ದೇನೆ. ಬಸ್ಸುಗಳ ಟಾಪ್ ಮೇಲೆ ಪ್ರಯಾಣ ಮಾಡಲು ಯಾರಿಗೂ ಅನುಮತಿಯನ್ನು ಕೊಡಲು ಸಾಧ್ಯವಿಲ್ಲ. ನಿನ್ನೆ ನಾನು ಒಂದು ಉದಾಹರಣೆಯನ್ನು ಕೊಟ್ಟು ಹೇಳಿದೆ. ಮುಖ್ಯವಾಗಿ ನಿರ್ವಾಹಕರು ಮತ್ತು ಜನರ ನಡುವೆ ಸಹಕಾರವಿರಬೇಕಾಗುತೆ. ಬಸ್ ನಿಂತ ತಕ್ಷಣ ಸರದಿಯಲ್ಲಿ ಜನರು ಒಳಗೆ ಬರಬೇಕೆಂದು ನಾಮಫಲಕ ಹಾಕಿದ್ದರೂ ಸಹ ನಮ್ಮಲ್ಲಿ ಹಾಗೆ ಜನರು ನಡೆದುಕೊಳ್ಳದೆ ಒಳಗೂ ನುಗ್ಗುತ್ತಾರೆ, ಮೇಲಕ್ಕೂ ನುಗ್ಗುತ್ತಾರೆ, ಲ್ಯಾಡರ್ ತೆಗೆದರೆ ವಿಂಡೊ ಮೇಲೆ ನಿಂತುಕೊಂಡು ಹೋಗುತ್ತಾರೆ. ಪಾಪ, ಅವರಿಗೂ ಸಹ ತೊಂದರೆ ಇದೆ. ಅವರು ಸಕಾಲದಲ್ಲಿ ತಮ್ಮ ಊರುಗಳಿಗೆ ಹೋಗಬೇಕಾಗುತ್ತದೆ. ನಮ್ಮಲ್ಲಿ ಸಾಕಷ್ಟು ಬಸ್ಸುಗಳಿವೆ. ಆದರೆ ಡ್ರೈವರ್‌ಗಳು ಮತ್ತು ನಿರ್ವಾಹಕರು ಇಲ್ಲ. ಸುಮಾರು 6-7 ಸಾವಿರ ಜನರನ್ನು ನೇಮಕ ಮಾಡಬೇಕಾಗಿದೆ. ನೇಮಕಾತಿ ಬಗ್ಗೆ ತಡೆಯಾಜ್ಞೆಯಾಗಿದೆ ಎಂದು ಅನೇಕ ಸಲ ಹೇಳುತ್ತಿದ್ದೇನೆ. ಅದೇ ಉತ್ತರವನ್ನು ಪದೇ ಪದೇ ಹೇಳಿ ಅದರ ಮಹತ್ವವೇ ಹೊರಟು ಹೋಗಿದೆ. ಜೊತೆಗೆ ಈ ಗುಲ್ಬರ್ಗ ಮತ್ತು ರಾಯಚೂರಿನ ಭಾಗಗಳಲ್ಲಿ ಸಿಬ್ಬಂದಿಯವರು ಹೆಚ್ಚು ಗೈರುಹಾಜರಾಗುತ್ತಾರೆ. ನಾವು ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಅದರ ಬಗ್ಗೆ ರಿವ್ಯೂಮಾಡುತ್ತಿದ್ದೇವೆ. ನಾನು ನನ್ನ ಇಲಾಖಾ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ workman culture ಹೊರಟು ಹೋಗಿದೆ ಎಂದು ಹೇಳಿದ್ದೇನೆ. Disciplinary action ತೆಗೆದು ಕೊಳ್ಳಬೇಕು. ನಾವು ತೆಗೆದುಕೊಳ್ಳುತ್ತಿದ್ದೇವೆ. ತನಿಖೆ ಮಾಡುತ್ತಿದ್ದೇವೆ. ಡಿಸ್‌ಮಿಸ್ಸನ್ನು ಸಹ ಮಾಡುತ್ತಿದ್ದೇವೆ. ಸ್ವಲ್ಪ ದಿನದಲ್ಲಿ ಇದನ್ನು ಸರಿ ಮಾಡುತ್ತೇವೆಂದು ನಾನು ತಮಗೆ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ತಮಗೆ ಈಗಾಗಲೇ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಅದರಲ್ಲಿ ಎಷ್ಟು ಲಾಂಗ್ ಟ್ರಿಪ್ ರೂಟ್‌ಗಳನ್ನು ತೆಗೆದುಹಾಕಿ ಶಾರ್ಟ್ ಟ್ರಿಪ್ ಬಸ್‌ಗಳನ್ನು ಹಾಕಿದ್ದೇವೆ ಎಂಬ ಬಗ್ಗೆ ಮಾಹಿತಿ ಇದೆ. ಲಾಂಗ್ ರೂಟ್‌ನ ಟ್ರಿಪ್‌ಗಳನ್ನು ಕಡಿಮೆ ಮಾಡಬೇಕೆಂದು ಹೇಳಿ 28, 23, 31, 12, ಕಿ.ಮೀ.ವರೆಗೆ 33 ಬಸ್ಸುಗಳನ್ನು ಹೊಸದಾಗಿ ಹಾಕಿದ್ದೇವೆ. ಜೊತೆಗೆ ಮೊನ್ನೆ ಮತ್ತೆ ಅವರಿಗೆ ಹೇಳಿದ್ದೇನೆ. ಏನೆಂದರೆ ಸ್ವಲ್ಪ ಸಹಕಾರ ಕೊಡಿ ಎಂದು, ಏನೇನು ಡಿಫೆಕ್ಟ್ ಇದೆ, ಯಾವ್ಯಾವ ಕಾರಣಕ್ಕೆ ಬಸ್‌ಗಳು ಕೆಟ್ಟಿವೆ, ಕೆಲವು ಸಲ ರೋಡ್ ಸರಿಯಿಲ್ಲದೆ ಪಂಕ್ಚರ್ ಆಗುತ್ತದೆ. ಬ್ರೇಕ್ ಡೌನ್ ಆಗುತ್ತದೆ. ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡಿನಿಂದ ರೋಡ್ ಸರಿ ಮಾಡಿಸಿಕೊಳ್ಳಿ, ಜೊತೆಗೆ ಕೆ.ಎಸ್.ಆರ್.ಟಿ.ಸಿ.ಗೆ ಸ್ವಲ್ಪ ಹಣ ವೆಚ್ಚ ಮಾಡಿ ಎಂದು ಆ ಭಾಗದ ಎಲ್ಲಾ ಸದಸ್ಯರನ್ನು ಕೇಳಿಕೊಂಡಿದ್ದೇನೆ. It is all inter-related. ಬರೀ ಬಸ್ ಅಂದ ತಕ್ಷಣ 4ವೀಲ್ ಹಾಕಿದ ತಕ್ಷಣ ಬಸ್ ಓಡುವುದಿಲ್ಲ. ಅದಕ್ಕೆ ರಸ್ತೆ ಬೇಕು ಡ್ರೈವರ್‌ಬೇಕು, ಕಂಡೆಕ್ಟರ್ ಬೇಕು ಅಲ್ಲಿ ಸ್ವಲ್ಪ ಡಿಫಿಕಲ್ಟಿ ಇದೆ. ಅದನ್ನೆಲ್ಲಾ ಸರಿಪಡಿಸಿಕೊಡುತ್ತೇನೆಂದು ನಾನು ಪ್ರಾಮಿಸ್ ಮಾಡಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಆಚಾರ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಉತ್ತರವನ್ನು ಹೇಳುತ್ತಿದ್ದೇನೆ. ಈ ರೀತಿಯ 9 ಸಹಕಾರ ಸಂಘಗಳನ್ನು ನಮ್ಮ ರಾಜ್ಯದಲ್ಲಿ 1983ರಲ್ಲಿ ಸ್ಥಾಪಿಸಬೇಕೆಂದು ತೀರ್ಮಾನ ಆಯಿತು. ಇವುಗಳ ಪೈಕಿ ಬಂಟ್ವಾಳ ತಾಲ್ಲೂಕು ಕೂಡ ಸೇರಿದೆ. ಈ 9ರ ಪೈಕಿ 2ನ್ನು ಮಾತ್ರ ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ ಲಿಮಿಟೆಡ್ (ಕೇಂದ್ರ ಸರ್ಕಾರ) ತಾ:31-3-85ರಲ್ಲಿ ಅನುಮತಿಯನ್ನು ಕೊಟ್ಟಿದೆ. ಇನ್ನುಳಿದ 7 ಸಹಕಾರ ಸಂಘಗಳಿಗೆ ತತ್ವಶ: ಒಪ್ಪಿಕೊಂಡಿದ್ದಾರೆ. ಆದರೆ ನೇರವಾಗಿ ಅದನ್ನು ಪ್ರಾರಂಭ ಮಾಡಿ ಎಂದು ಅನುಮತಿ ಕೊಟ್ಟಿಲ್ಲ. ಈ ಸಹಕಾರ ಸಂಘದ ಕಾರ್ಯ ಚಟುವಟಿಕೆಯನ್ನು ನಡೆಸಬೇಕಾದರೆ 60 ಪರ್ಸೆಂಟ್ ವೆಚ್ಚವನ್ನು ಕೇಂದ್ರಸರ್ಕಾರದವರೂ ಉಳಿದ 40 ಪರ್ಸೆಂಟ್ ಖರ್ಚನ್ನು ರಾಜ್ಯ ಸರ್ಕಾರ ಮತ್ತು

ಸಹಕಾರ ಸಂಘದ ಸದಸ್ಯರು ವಹಿಸಬೇಕಾಗುತ್ತದೆ. 31-3-85 ರಂದು ಈ 2 ಸಹಕಾರ ಸಂಘಗಳನ್ನು ಸ್ಥಾಪಿಸುವುದಕ್ಕೆ ಅನುಮತಿಯನ್ನೇನೋ ಕೊಟ್ಟರು. ಆದರೆ ಇದುವರೆಗೂ ಪ್ರಾರಂಭವೇ ಆಗಲಿಲ್ಲ. ಇದು ಆಗುವವರೆಗೂ ಅವರು ಅವಕಾಶ ಕೊಡುವುದಿಲ್ಲ. ಬಳ್ಳಾರಿ ಜಿಲ್ಲೆಯ ಹಡಗಲಿ ಮತ್ತು ಗುಲ್ಬರ್ಗಾ ಜಿಲ್ಲೆಯ ಅಳಂದೇನಲ್ಲಿ ಪ್ರಾರಂಭ ಮಾಡುವುದಕ್ಕೆ ಅನುಮತಿ ಇದೆ ಇದನ್ನು ಪ್ರಾರಂಭ ಮಾಡಿದ ಕೂಡಲೇ ನಾವು ಮತ್ತೆ ಅನುಮತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ರೂರಲ್ ಎಲೆಕ್ಟ್ರಿಫಿಕೇಷನ್‌ನವರಿಗೆ ಸದ್ಯಕ್ಕೆ ನಮ್ಮ ಮೇಲೆ ವಿಶ್ವಾಸ ಇಲ್ಲ. ಮೊದಲು ಈ ಎರಡನ್ನೂ ಪ್ರಾರಂಭಮಾಡಿ ಅವರಿಗೆ ಮನವರಿಕೆ ಮಾಡಿಕೊಟ್ಟು ಅನಂತರ ಬಂಟ್ವಾಳವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ.ಎಸ್.ಆಚಾರ್:- 85 ರಲ್ಲಿ ಅನುಮತಿ 2ಕ್ಕೆ ಸಿಕ್ಕಿದೆ, ಅವಾದರೂ ಪ್ರಾರಂಭವಾಗಿವೆಯೇ?

ಶ್ರೀ ಡಿ.ಕೆ.ಶಿವಕುಮಾರ್:- ಇನ್ನೂ ಪ್ರಾರಂಭವೇ ಆಗಿಲ್ಲ. ಈ ಎರಡೂ ಪ್ರಾರಂಭ ಆದಮೇಲೆ ಮೂರನೆಯದಾಗಿ ನಿಮ್ಮ ಬಂಟ್ವಾಳದ್ದು ತೆಗೆದುಕೊಳ್ಳುತ್ತೇವೆ.

ವಿಷಯ:- ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸುಗಳು.

ಚುಕ್ಕೆ ಗುರುತಿನ ಪ್ರಶ್ನೆ : 437 (2245)

ಶ್ರೀ ಎಸ್ ಷಫಿ ಅಹಮದ್ (ತುಮಕೂರು):- ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳ ಮತ್ತು ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು?

ಆ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗೀ ಸಂಸ್ಥೆಗಳೆಷ್ಟು? ಮತ್ತು ಯಂತ್ರೋಪಕರಣಗಳನ್ನು ಖರೀದಿಸಲು ಅಳವಡಿಸಿರುವ ಪದ್ಧತಿ ಮತ್ತು ಎಷ್ಟು ಮೌಲ್ಯದ ಯಂತ್ರಗಳನ್ನು ಖರೀದಿಸಲಾಗಿದೆ (ಕಾಲೇಜುವಾರು ವಿವರಗಳನ್ನು ನೀಡುವುದು)

ಇ ಹೊಸ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳನ್ನು ಅನುದಾನ ಸಂಹಿತೆ ಒಳಗೆ ತರುವ ಪ್ರಸ್ತಾವನೆಗಳೇನಾದರೂ ಸರ್ಕಾರದ ಮುಂದಿದೆಯೇ ?

ಈ ಇತ್ತೀಚಿನ ನವೀನ ವಿಷಯಗಳಲ್ಲಿ ಕಾಲೇಜುಗಳ ಕೋರ್ಸುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳೇನಾದರೂ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಅವುಗಳು ಯಾವುವು?

ಶ್ರೀ ಎಂ.ವೀರಪ್ಪಮೊಯಿಲಿ, (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು)-

ಅ

	ಸರ್ಕಾರಿ	ಖಾಸಗೀ ಅನುದಾನಿತ	ಖಾಸಗೀ ಅನುದಾನ ರಹಿತ	ಒಟ್ಟು
ಇಂಜಿನಿಯರಿಂಗ್ ಕಾಲೇಜು	5	11	35	51
ಪಾಲಿಟೆಕ್ನಿಕ್‌ಗಳು	31	7	120	158
ಇಂಜಿನಿಯರಿಂಗ್ ಕಾಲೇಜುಗಳು			11	
ಪಾಲಿಟೆಕ್ನಿಕ್‌ಗಳು			7	

\- ಶ್ರೀ ಬಾಬುರಾವ್ ಚವ್ಹಾಣ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳತಕ್ಕಂತಹ ಉತ್ತರ